**ಹೆಚ್ಚುವರಿ ಸಿವಿಲ್ ಮತ್ತು ಪ್ರಥಮ ದರ್ಜೆ ನ್ಯಾಯಿಕ ದಂಡಾಧಿಕಾರಿಗಳವರ ನ್ಯಾಯಾಲಯ ಚಿಂಚೋಳಿ**

**ಸಿ.ಸಿ. ನಂ. 101/2018**

| | | | |
|---|---|---|---|
| **ಹೆಸರು** | **:** | **ಸಂಗಯ್ಯ** | **DW-1** |
| **ತಂದೆಯ ಹೆಸರು** | **:** | **ಚಂದ್ರಯ** | **ದಿನಾಂಕಃ 22-10-2024** |
| **ವಯಸ್ಸು** | **:** | **33 ವರ್ಷ** | |
| **ಉದ್ಯೋಗ** | **:** | **ಪಂಚಾಯತಿ ಕಾರ್ಯದರ್ಶಿ** | |
| **ವಾಸಸ್ಥಳ** | **:** | **ರುದನೂರು** | |

**ಸಾಕ್ಷಿಗೆ ಪ್ರಮಾಣ ವಚನ ಬೋಧಿಸಲಾಯಿತು.**

**ಮುಖ್ಯ ವಿಚಾರಣೆಃ ಆರೋಪಿತರ ಪರವಾಗಿ ಶ್ರೀ SBK ವಕೀಲರಿಂದಃ**

ದಿನಾಂಕಃ 10-07-2016 ರಂದು ನನ್ನ ಮದುವೆ ಪ್ರಾಸಾ 3 ರವರ ಜೊತೆ ರಾಯಕೋಡ ಗ್ರಾಮದಲ್ಲಿ ಆಗಿರುತ್ತದೆ. ಮದುವೆ ಮೊದಲಿನಿಂದ ಪ್ರಾಸಾ 3 ರವರು ನನಗೆ ಏಕವಚನದಲ್ಲಿ ಕೆಟ್ಟದಾಗಿ ಮಾತನಾಡುತ್ತಾ ಬಂದಿರುತ್ತಾರೆ. ಪ್ರಾಸಾ 3 ರವರು ಮದುವೆ ಮೊದಲು ಊರು ಜಾತ್ರೆಯಲ್ಲಿ ಮತ್ತು ಮೊಬೈಲ SMS ಗಳಲ್ಲಿ ಸಹ ಅವಳಿಗೆ ಮದುವೆ ಇಷ್ಟಇಲ್ಲ ಮತ್ತು ಅವಳ ಅಣ್ಣನ ಒತ್ತಾಯದಿಂದ ಮದುವೆ ಆಗುತ್ತಿದ್ದಾಳೆ ಎಂದು ನನಗೆ ತಿಳಿಸಿರುತ್ತಾಳೆ. ಆಗ ಪ್ರಾಸಾ 3 ರವರು ನನಗೆ ಮದುವೆ ಇಷ್ಟಇಲ್ಲ, ನನ್ನ ಅಕ್ಕಳ ಜೀವನ ಸಹ ಹೀಗೇ ಆಗಿದೆ, ಆದ್ದರಿಂದ ಮದುವೆ ಅದ ಮೇಲೆಯೂ ಸಹ ನಿನ್ನ ಜೀವನ ನಿನಗೆ ಮತ್ತು ನನ್ನ ಜೀವನ ನನಗೆ ಎಂದು ಹೇಳಿರುತ್ತಾಳೆ. ಆಗ ನಾನು ಮದುವೆ ಬೇಡ ಎಂದು ಪ್ರಾಸಾ 3 ರವರ ಅಣ್ಣನಾದ ಪ್ರಾಸಾ 15 ರವರಿಗೆ ಹೇಳಿದಾಗ ಅವರು ನಮ್ಮ ಮನೆಯಲ್ಲಿ ಈಗಾಗಲೇ 2 ಮದುವೆಗಳು ನಿಂತುಹೋಗಿವೆ, ಹಾಗಾಗಿ ಈ ಮದುವೆ ನಿಂತುಹೋದರೆ ನಮಗೆ ಬದುಕಲು ಆಗುವುದಿಲ್ಲ ಎಂದು ಹೇಳಿ ನನಗೆ ಒಪ್ಪಿ ಸಿರುತ್ತಾರೆ. ಆದ್ದರಿಂದ ನಾನು ಪ್ರಾಸಾ 3 ರವರ ಜೊತೆ ಮದುವೆ ಆಗಿರುತ್ತೇನೆ.

ಮದುವೆಯಾಗಿ 15 ದಿನಗಳ ಕಾಲ ಪ್ರಾಸಾ 3 ರವರು ನನ್ನ ಜೊತೆ ಚೆನ್ನಾಗಿ ಇದ್ದು, ನಂತರ ಪ್ರಾಸಾ 3 ರವರು ನನ್ನ ತಾಯಿಗೆ ನೀನು ಮನೆಯಲ್ಲಿ ಇರಬೇಡ ಎಂದು ಹೇಳಿ ಜಗಳ ಮಾಡುತ್ತಾ ಬಂದಿರುತ್ತಾರೆ. ದಿನಾಂಕಃ 25-07-2016 ರಂದು ನಾವು ಸೇಡಂದಲ್ಲಿ ವಾಸವಿರುವಾಗ ಪ್ರಾಸಾ 3 ರವರು ನನ್ನ ತಾಯಿಯ ಕೈ ಹಿಡಿದು ಎಳೆದಾಡಿ ಹೊಡೆದಿರುತ್ತಾಳೆ. ಆಗ ನನ್ನ ತಾಯಿ ನೀವು ಚೆನ್ನಾಗಿ ಇರು ಎಂದುಹೇಳಿ ರುದನೂರು ಗ್ರಾಮಕ್ಕೆ ಹೋಗಿರುತ್ತಾರೆ. ಪ್ರಾಸಾ 3 ರವರು ನಾನು ಮಲಗಿಕೊಂಡಾಗ ಕಣ್ಣಲ್ಲಿ ಕಾರ ಹಾಕುವುದು ಮತ್ತು ಬಳೆಯಿಂದ ಚೂರುವುದು ಮಾಡುತ್ತಾ ಬಂದಿರುತ್ತಾರೆ. ಆಗಿನಿಂದ ಪ್ರಾಸಾ 3 ರವರು ನನಗೆ ಮಾನಸಿಕ ಮತ್ತು ದೈಹಿಕ ಕಿರುಕುಳ ನೀಡುತ್ತಾ ಬಂದಿರುತ್ತಾರೆ. ಪ್ರಾಸಾ 3 ರವರು ನನಗೆ ನಿನ್ನ ಜೊತೆ ಇರಲು ಆಗುವುದಿಲ್ಲ, ನೀನು ಸತ್ತು

ಹೋಗು ಎಂದು ಕಿರುಕುಳ ನೀಡುತ್ತಾ ಬಂದಿರುತ್ತಾರೆ. ಗೆಳೆಯರು ಅಥವಾ ಸಂಬಂಧಿಕರು ಮನಗೆ ಬಂದರೂ ಸಹ ಪ್ರಾಸಾ 3 ರವರು ನೀವು ಏಕೆ ಮನೆಗೆ ಬಂದಿದ್ದೀರಾ ಎಂದು ಹೇಳಿ ಅವರ ಜೊತೆ ಜಗಳವಾಡುತ್ತಿದ್ದರು. ಒಂದು ದಿನ ಪ್ರಾಸಾ  3 ರವರು ಮನೆಯಲ್ಲಿದ್ದ ಪುಸ್ತಕಗಳು ಮತ್ತು ಬಟ್ಟೆಗಳು ಸುಳ್ಳು ಹಾಕಿರುತ್ತಾರೆ. ಮತ್ತು ಅದರ ಬಗ್ಗೆ ನಾನು ಪ್ರಾಸಾ 3 ರವರಿಗೆ ಕೇಳಿದಾಗ ಅವರು ತಾಳಿಯನ್ನು ಕಳೆದು ಬಿಸಾಕಿರುತ್ತಾರೆ. ಇದರ ಬಗ್ಗೆ ನಾನು ಪ್ರಾ ಸಾ 15 ರವರಿಗೆ ತಿಳಿಸಿದಾಗ ಪ್ರಾಸಾ 15 ರವರು ನಾನು ಬರುತ್ತೇನೆ ನೀನು ಏನು ಮಾತಾಡಬೇಡ ಎಂದು ತಿಳಿರುತ್ತಾನೆ. ಪ್ರಾಸಾ 15 ರವರು ಮನೆಗೆ ಬಂದು ಪ್ರಾಸಾ 3 ರವರಿಗೆ ಬುದ್ದವಾದ ಹೇಳಿದರು ಸಹ ಪ್ರಾಸಾ 3 ರವರು ತನ್ನ ಅಣ್ಣನಿಗೆ ಹೊಡೆದಿರುತ್ತಾಳೆ.

ನಂತರ ಚಾಸಾ 12 ರವರು ಮತ್ತು ಪ್ರಾಸಾ 15 ರವರು ಪ್ರಾ ಸಾ 3 ರವರಿಗೆ ಒಬ್ಬಳೇ ಇರಲೂ ಹೇಳಿದಾಗ ಪ್ರಾಸಾ 3 ರವರು ಎರಡು ದಿನಗಳ ಕಾಲ ಸೇಡಂನಲ್ಲಿ ಇದ್ದರು ಮತ್ತು ನಾನು ನನ್ನ ಊರಾದ ರುದನೂರಿನಲಿ ಇದ್ದೆ. ನಂತರ ಎರಡು ದಿನಗಳ ಕಾಲ ನಾನು ಸೇಡಂಗೆ ಹೋಗಿರುತ್ತೇನೆ. ಆಗ 1 ವಾರಗಳ ಕಾಲ ಪ್ರಾಸಾ 3 ರವರು ನನ್ನ ಜೊತೆ ಚೆನಾಗಿ ಇರುತ್ತಾರೆ. ಆಗ ಪ್ರಾಸಾ 3 ರವರು ಗರ್ಭಿಣಿಯಾಗಿರುತ್ತಾರೆ. ಕೆಲ ದಿನಗಳಾದ ನಂತರ ನನ್ನ ತಾಯಿಗೆ ಕರೆದುಕೊಂಡು ಬರಲು ತಿರ್ಮಾನಿಸಿದಾಗ ಪ್ರಾಸಾ 3 ರವರು ಬೇಡ ಎಂದು ಹೇಳಿ ಹಟ ಹಿಡಿದಿರುತ್ತಾರೆ. ನಂತರ ಪ್ರಾಸಾ 3 ರವರ ಹೊಟ್ಟೆಯಲ್ಲಿ ಮಗು ಸರಿಯಾಗಿ ಬೆಳೆಯದೇ ಇರುವ ಕಾರಣ ಪ್ರಾಸಾ 3 ರವರು ಗರ್ಭಪಾತ ಮಾಡಿಸಿಕೊಂಡಿರುತ್ತಾರೆ. ಆಗ ಪ್ರಾಸಾ 3 ರವರು ನನ್ನ ತವರುಮನೆಯಲ್ಲಿ 3 ತಿಂಗಳ ಕಾಲ ಎಂದರೆ ಅಕ್ಟೋರಬರ 2016 ರಿಂದ 13-12-2016 ರವರೆಗೆ ವಿಶ್ರಾಂತಿ ಪಡೆಯುತ್ತೇನೆ ಎಂದು ರಾಯಕೋಡದಲಿರುವ ತವರುಮನೆಗೆ ಹೋಗಿರುತ್ತಾರೆ. ಆಗಲೂ ಸಹ ನಾನು ರಾಯಕೋಡಿಗೇ ಹೋಗಿಬರುವುದು ಮಾಡಿರುತೇನೆ.

ದಿನಾಂಕಃ 13-12-2016 ರಂದು ನಾನು ಪ್ರಾಸಾ 3 ರವರಿಗೆ ಅವರ ತವರು ಮನೆಯಿಂದ ನಮ್ಮ ಮನೆಗೆ ಕರೆದುಕೊಂಡು ಬಂದಿರುತೇನೆ. ಪ್ರಾಸಾ 3 ರವರು ಒಂದು ವಾರಗಳ ಕಾಲ ನನ್ನ ಜೊತೆ ಚೆನ್ನಾಗಿ ಇದ್ದರು. ನಂತರ ನಾನು ನನ್ನ ತಾಯಿಗೆ ಕರೆದುಕೊಂಡು ಬರುತ್ತೇನೆ ಎಂದುಹೇಳಿದಾಗ ಮತ್ತೆ ಪ್ರಾಸಾ 3 ರವರು ಜಗಳ ಪ್ರಾರಂಭಸಿರುತ್ತಾರೆ. ನನ್ನ ತಾಯಿಗೆ ಈಗ 60 ವರ್ಷ ವಯಸ್ಸಾಗಿದ್ದು ಮತ್ತು ಅವರಿಗೆ ನಾನು ಒಬ್ಬನೇ ಮಗನಿರುತ್ತೇನೆ.

25 ಮಾರ್ಚ 2017 ರಂದು ನನ್ನ ತಾಯಿ ಬಿಪಿ ಕಡಿಮೆ ಆದ ಕಾರಣ ನನ್ನ ತಾಯಿಗೆ ನಾನು ಸೇಡಂನಲಿರುವ ರೆಡ್ಡಿ ಆಸ್ಪತ್ರೆಗೆ ಕರೆದುಕೊಂಡು ಹೋಗಿ ಮರಳಿ ಮನೆಗೆ ಬರುವಾಗ ನಾನು ಮತ್ತು ನನ್ನ ತಾಯಿ ದ್ವಿಚಕ್ರವಾಹನದಿಂದ ಬಿದ್ದಿರುತ್ತೇವೆ. ಆಗ ನಾನು ಮತ್ತು ನನ್ನ ತಾಯಿ ಚಿಕಿತ್ಸೆಗಾಗಿ 3 ತಿಂಗಳ ಕಾಲ ಆಸ್ಪತ್ರೆಯಲ್ಲಿದ್ದಾಗ ಪ್ರಾಸಾ 3 ಅಥವಾ ಅವರ ಸಂಬಂಧಿಕರು ನಮಗೆ ನೋಡಲು ಆಸ್ಪತ್ರೆಗೆ ಬಂದಿರುವುದಿಲ್ಲ ಹಾಗೂ ನಾನು ಪ್ರಾಸಾ 3 ರವರಿಗೆ ಕರೆ ಮಾಡಿದರೂ ಸಹ ಪ್ರಾಸಾ 3 ರವರು ನನ್ನ ಕರೆ ಪಡೆದಿರಲಿಲ್ಲ.

ನಂತರ ಜೂನ ತಿಂಗಳಲ್ಲಿ ನಾನು ಮನೆಯಲ್ಲಿದ್ದಾಗ ಪ್ರಾಸಾ 3 ರವರು ಅವಳ ಅಣ್ಣ, ತಮ್ಮ ಮತ್ತು ತಂದೆ ತಾಯಿ ಜೊತೆ ಬೆಂಗಳೂರು ಕುಕ್ಕೆಸುಬ್ರಮಣ್ಯ ಎಂದು ಪ್ರವಾಸಕ್ಕೆ ಹೋಗಿರುತ್ತಾರೆ. ಆಗ ನಾನು ಪ್ರಾಸಾ 3 ರವರ ತಮ್ಮನಾದ ಶರಣಯ ಮತ್ತು ಪ್ರಾಸಾ 15 ರವರಿಗೆ ನನಗೆ ಕೇಳದೇ ಪ್ರಾಸಾ 3 ರವರಿಗೆ ಕರೆದುಕೊಂಡು ಹೋಗಿರುವ ಬಗ್ಗೆ ಕೇಳಿದಾಗ ಶರಣಯ್ಯ ರವರು ನಮ್ಮ ಮನಸ್ಸು ನಾವು ಕರೆದುಕೊಂಡು ಹೋಗುತ್ತೇವೆ ನೀನು ಯಾರು ಎಂದು ಕೇಳಿರುತ್ತಾರೆ.

2017 ರ ಜೂನ ಜುಲೈ ತಿಂಗಳಲ್ಲಿ ಶರಣಯ್ಯ ರವರು ಸೇಡಂನಲ್ಲಿದ್ದ ನಮ್ಮ ಮನೆಗೆ ಬಂದು ಪಾಸಾ 3 ರವರು ತಮ್ಮನಾದ ಶರಣಯ್ಯ ರವರು ಏಕಾಏಕಿ ನಮ್ಮ ಮನೆಗೆ ಬಂದು ನೀನು ಯಾರು ನಮಗೆ ಕೇಳಲು ಎಂದು ನನಗೆ ಹೊಡೆಬಡೆ ಮಾಡಿರುತ್ತಾರೆ. ಆಗ ಅಕ್ಕಪಕ್ಕದ ಮನೆಯವರಾದ ಚಂದು ಹರಸೂರು, ಗಜೇಂದ್ರ ಬಟಗೇರಾ ಎಂಬುವವರು ಜಗಳ ಬಿಡಿಸಿರುತ್ತಾರೆ. ನಂತರ ನನ್ನ ಸೋದರಮಾವನಾದ ಮನೋಹರ ಸ್ವಾ ಮಿ ರವರಿಗೆ ಘಟನೆ ಬಗ್ಗ ತಿಳಿಸಿದಾಗ ಅವರು ಊರಿಗೆ ಬರಲು ತಿಳಿಸಿದರು. ನಂತರ ನಾನು ರುದನೂರಿಗೆ ಹೋದಾಗ ಶರಣಯ ತನ್ನ ಜೊತೆ 7 ರಿಂದ 8 ಜನರನ್ನು ಕರೆದುಕೊಂಡು ಬಂದು ನಮಗೆ ಹೊಡೆಬಡೆ ಮಾಡಿ ಗಲಾಟೆ ಮಾಡಿರುತ್ತಾರೆ. ಆದ್ದರಿಂದ ನಾನು ಮತ್ತು ನನ್ನ ಸಂಬಂಧಿಕರು ಸೇರಿ ಸುಲೇಪೇಟ ಪೋಲಿಸ ಠಾಣೆಗೆ ಹೋಗಿರುತ್ತೇವೆ. ಆಗ ಅಲ್ಲಿದ್ದ PSI ರವರಾದ ಪ್ರದೀಪ ಕೊಳ್ಳರವರು ನಮಗೆ ಹಾಗೂ ಪ್ರಾಸಾ 3 ರವರಿಗೆ ತಿಳಿಹೇಳಿ ಸಮಜಾಯಿಸಿ ಕಳುಹಿಸಿದರು. ಆಗ PSI ರವರು 3 ವಾರಗಳ ಕಾಲ ಪೋಲಿಸ ಠಾಣೆಗೆ ಬನ್ನಿ ಮತ್ತು ರಾಜಿ ಸಂದಾನ ಮಾಡಿಕೊಳ್ಳಿ ಎಂದು ಹೇಳಿದ ಕಾರಣ ನಾವು 3 ವಾರಗಳ ಕಾಲ ಪೋಲಿಸ ಠಾಣೆಗೆ ಹೋಗಿರುತ್ತೇವೆ ಮತ್ತು ಪ್ರಾಸಾ 3 ರವರು 3 ವಾರಗಳ ಕಾಲ ಚೆನ್ನಾ ಗಿ ಇದ್ದರು.

ಅಗಸ್ಟ 2017 ರ ಮೊದಲು ಒಂದು ದಿನ ನಾನು ಮಲಗಿಕೊಂಡಾಗ ಪ್ರಾಸಾ 3 ರವರು ಒಂದು ಬಾಟಲಿಯಿಂದ ನನಗೆ ಹೊಡೆದು ಅವರ ಬಳೆಯಿಂದ ನನಗೆ ಚೂರಿರುತ್ತಾಳೆ. ಮರುದಿನ ನಾನು ಪ್ರಾಸಾ 3 ರವರಿಗೆ ಸಮಸೆಯ ಬಗ್ಗೆ ಕೇಳಿದಾರ ಅವರು ನನಗೆ ತಿಳಿಸಿದ್ದೇನೆಂದರೆ ನನಗೆ ಇರಲು ಆಗುತ್ತಿಲ್ಲ ಮತ್ತು ಹೇಗಾದರೂ ಮಾಡಿ ನನಗೆ ಬಿಡುಗಡೆ ಕೊಡು ಎಂದು ಹೇಳಿರುತ್ತಾಳೆ.

ದಿನಾಂಕಃ 09-08-2017 ರಂದು ನಾನು ಪ್ರಾಸಾ 3 ರವರಿಗೆ ವಿಚ್ಛೆದನಕ್ಕಾಗಿ ಕಾನೂನು ಬದ್ದ ನೋಟಿಸನ್ನು ಕಳುಹಿಸಿರುತ್ತೇನೆ. ಆಗ ಸದರಿ ನೋಟಿಸನು ಪ್ರಾಸಾ 3 ರವರು ಪಡೆದಿರುವುದಿಲ ಮತ್ತು ಪ್ರಾಸಾ 15 ರವರು ನನಗೆ ಕರೆಮಾಡಿ ಇದರ ಬಗ್ಗೆ ಯಾವುದೇ ನಿರ್ಧಾರ ಮಾಡಬೇಡಿ ಎಂದು ಹೇಳಿರುತ್ತಾರೆ.

ದಿನಾಂಕಃ 25-08-2017 ರಂದು ನನ್ನ ಸಂಬಂಧಿಕರು ಹಾಗೂ ಪ್ರಾಸಾ 3 ರವರ ಸಂಬಂಧಿಕರು ಸೇರಿ ಪಂಚಾಯತಿ ಮಾಡಿದಾಗ ಪ್ರಾಸಾ 3 ರವರಿಗೆ ಕರೆದುಕೊಂಡು ಹೋಗಲು ನನಗೆ ಹೇಳಿರತ್ತಾರೆ. ಅದ್ದರಿಂದ ನಾನು ಮರುದಿನ ಪ್ರಾಸಾ 3 ರವರಿಗೆ ಕರೆದುಕೊಂಡು ಹೋಗಲು ಅವರ ಮನೆಗೆ ಹೋದಾಗ ಪ್ರಾಸಾ 3 ರವರು ನನಗೆ ನಿನಗೆ ನಾಚಿಕೆ ಇಲ್ಲವಾ ಮತ್ತೆ ಕರೆಯಲು ಬಂದಿದ್ದೀಯಾ ಎಂದು ಹೇಳಿ ಹಿಯಾಳಿಸಿ ಮಾತನಾಡಿರುತ್ತಾಳೆ. ಪ್ರಾಸಾ

3 ರವರು ನನಗೆ ನಿಮ್ಮ ಮನೆಗೆ ಬಂದರೂ ಸಹ ನಿನ್ನ ಜೊತೆ ಜೀವನ ಮಾಡುವುದಿಲ್ಲ ಮತ್ತು ನಿನಗೆ ಮತ್ತು ನಿನ್ನ ತಾಯಿಗೆ ಜೈಲಿನಲ್ಲಿ ಹಾಕಿಸುತ್ತೇನೆ ಎಂದು ಹೇಳಿರುತ್ತಾಳೆ. ಆಗ ಪ್ರಾಸಾ 15 ರವರು ನನಗೆ ಸಮಜಾಯಿಸಿ ಇದೊಂದು ಬಾರಿ ಕರೆದುಕೊಂಡು ಹೋಗು ಎಂದು ಹೇಳಿದ ಕಾರಣ ನಾನು ಪ್ರಾಸಾ 3 ರವರಿಗೆ ನಮ್ಮ ಮನೆಗೆ ಕರೆದುಕೊಂಡು ಹೋದೆ.

ಸೆಪ್ಟೆಂಬರ 2017 ರವರೆಗೆ ಪ್ರಾಸಾ 3 ರವರು ನನ್ನ ಜೊತೆ ಚೆನ್ನಗಿ ಇದ್ದರು. ದಿನಾಂಕಃ 09-10-2017 ರ ರಾತ್ರಿ ನಾನು ಮನೆಗೆ ಹೋದಾಗ ಪ್ರಾಸಾ 3 ರವರು ನನಗೆ ತಲೆ ನೋವು ಆಗುತ್ತಿದ ಎಂದು ಹೇಳಿದಾಗ ನಾನು ಮರುದಿನ ಬೆಳಿಗ್ಗೆ ಆಸ್ಪತ್ರೆಗೆ ಹೋಗೋಣ ಎಂದು ಹೇಳಿರುತ್ತೇನೆ. ಆದ್ದರಿಂದ ನನ್ನ ಜೊತೆ ಮಾತನಾಡದೇ ಪ್ರಾಸಾ 3 ರವರು ಮಲಗಿಕೊಂಡಿರುತ್ತಾರೆ. ಮರುದಿನ ಬೆಳಿಗ್ಗೆ ಪ್ರಾಸಾ 3 ರವರಿಗೆ ನಾನು ಆಸ್ಪತೆಗೆ ಕಳುಹಿಸಿಕೊಟ್ಟಾಗ ಅವರ ಸಂಬಂಧಿಕರಾದ ಚಾಸಾ 12 ರವರ ಮನೆಗೆ ಹೊಗಿರುವ ಬಗ್ಗೆ ನನಗೆ ಗೊತ್ತಾಗಿರುತ್ತದೆ. ದಿನಾಂಕಃ 12-10-2017 ರಂದು ಪ್ರಾಸಾ 3 ರವರು ನನ್ನ ವಿರುದ್ದ ವರದಕ್ಷಿಣೆ ಕಿರುಕುಳ್ಳಕಾಗಿ ದೂರು ನೀಡಿರುತ್ತಾರೆ ಎಂದು ಗೊತ್ತಾಗಿರುತ್ತದೆ. ನಂತರ ಪ್ರಾಸಾ 3, 7 ಮತ್ತು 15 ರವರು ನನಗೆ ಕರೆಮಾಡಿ ನಿನ್ನ ತಾಯಿಗೆ ಬಿಟ್ಟು ಬೇರೆ ಮನೆ ಮಾಡಿದರೆ ಮಾತ್ರ ಪ್ರಕರಣ ವಾಪಸ್ಸು ಪಡೆಯುತ್ತೇವೆ ಎಂದುಹೇಳಿರುತ್ತಾರೆ.

ನಂತರ ನವೆಂಬರ 2017 ರಲ್ಲಿ ನಾನು ಪ್ರಾಸಾ 3 ರವರ ವಿರುದ್ದ ವಿಚ್ಚೇದನಕ್ಕಾಗಿ ಮಾನ್ಯ ನ್ಯಾಯಾಲಯದಲ್ಲಿ ಅರ್ಜಿಯನ್ನು ಸಲ್ಲಿಸಿರುತ್ತೇನೆ. ನಂತರ ಪ್ರಾಸಾ 3 ರವರು ಗರ್ಬಿಣಿಯಾದ ಬಗ್ಗೆ ನನಗೆ ಗೊತ್ತಾದ ಕಾರಣ ನಾನು ಪ್ರಾಸಾ 3 ರವರಿಗೆ ಬೇಟಿಯಾಗಲು ಹೋದಾಗ ನಿನಗೆ ನ್ಯಾಯಾಲಯದಲ್ಲಿ ನೋಡಿಕೊಳ್ಳುತ್ತೇನೆ ಎಂದು ಹೇಳಿರುತ್ತಾರೆ. ನಾನು ಸಲ್ಲಿಸಿದ ವಿಚ್ಚೇದನದ ಅರ್ಜಿ ವಜಾಗೊಡಿರುತ್ತದೆ.

2018 ರಲ್ಲಿ ಮಗಳು ಜನಿಸಿರುವ ಸುದ್ದಿ ನನಗೆ ಗೊತ್ತಾಗಿರುತ್ತದೆ. ಪ್ರಾಸಾ 3 ರವರು ನನಗೆ ಕರೆಯದೇ ಇದ್ದರೂ ಸಹ ನಾನು ಗುಲ್ಬರ್ಗಾದ ESI ಆಸ್ಪತ್ರೆಗೆ ನಾನು ಮತ್ತು ನನ್ನ ತಾಯಿ ಸೇರಿ ಹೋದಾಗ ನನ್ನ ಜೊತೆ ಮಾತನಾಡದೇ ಒಂದು ಟೇಬಲನಲ್ಲಿ ಮಗುವನ್ನು ಇಟ್ಟು ನೋಡಿಕೊಳ್ಳಲು ಹೇಳಿ ಹೋಗಿರುತ್ತಾರೆ. ನಂತರ ನನ್ನ ಮಗುವನ್ನು ಪ್ರಾಸಾ 3 ರವರು ತೆಗೆದುಕೊಂಡು ಹೋಗಿರುತ್ತಾರೆ. ನಾನು ಪ್ರಾಸಾ 3 ಮತ್ತು ನನ್ನ ಮಗುವನ್ನು ನೋಡಿಕೊಳ್ಳಲು ತಯಾರಿದ್ದರೂ ಸಹ ಪ್ರಾಸಾ 3 ರವರು ನ್ಯಾಯಾಲಯದಲ್ಲಿ ಏನು ತೀರ್ಮಾನ ವಾಗುತ್ತದೆ ಅದನ್ನು ನೋಡೋಣ ಮತ್ತು ನನಗೆನಿನ್ನ ಜೊತೆ ಸಂಸಾರ ಮಾಡಲು ಇಷ್ಟವಿಲ್ಲ ಎಂದು ಹೇಳಿರುತ್ತಾರೆ.

ನ್ನನ ಮಗವಿನ ನಾಮಕಾರಣಕ್ಕೂ ಸಹ ನನಗೆ ಪ್ರಾಸಾ 3 ರವರು ಕರೆದಿರುವುದಿಲ್ಲ, ಹಾಗೂ ಪ್ರಾಸಾ 3 ರವರು ನಾಮಕರಣಕ್ಕೆ ನನ್ನ ಗೆಳೆಯರಿಗೆ ಕರೆಮಾಡಿ ಕರೆದಿರುತ್ತಾಳೆ. ಮಗಳ ದೋಷಪೂಜೆ ಮತ್ತು ಮಗಳ ಶಾಲೆಗೆ ದಾಖಲಿಸಿಕೊಳ್ಳುವಾಗ ಪ್ರಾಸಾ 3 ರವರು ನನಗೆ ಕರೆದಾಗ ನಾನು ಹೋಗಿರುತೇನೇ, ಅವಶ್ಯಕತೆ ಇದ್ದಾಗ ನನಗೆ ಪ್ರಾಸಾ 3 ರವರು ಕರೆದಾಗ ನಾನು ಹೋಗಿರುತ್ತೇನೆ ಹಾಗೂ ಸ್ವಲ್ಪ ದಿನಗಳ ಹಿಂದೇ ಪ್ರಾಸಾ 3 ರವರ ತಂದೆ ಮೃತಪಟ್ಟಾಗ ನಾನು ಹೊೀಗಿದ್ದು ಆಗ ನೀನು ಏಕೆ ಇಲ್ಲಿ ಬರುತ್ತಿಯಾ ಎಂದು ಹೇಳಿ ಅವಾಚ್ಯವಾಗಿ ಬೈದು

ಕಳುಹಿಸಿರುತ್ತಾರೆ.

ನನ್ನ ಮಗಳ ಹೆಸರಿನಲ್ಲಿ 13 ಲಕ್ಷದ ಜೀವವಿಮೆ ಸಹ ಮಾಡಿಸಿರುತ್ತೇನೆ. ಸದರಿ ವಿಮೆಗಾಗಿ ನನ್ನ ಪ್ರತಿ ತಿಂಗಳದ ಸಂಬಳದಲ್ಲಿ ರೂ. 1800/- ಕಡಿತಗೊಳುತ್ತದೆ. ಪ್ರಾಸಾ 3 ರವರು ನನ್ನ ಗೆಳೆಯರಿಗೂ ಹಾಗೂ ನನ್ನ ಸಂಬಂಧಿಕರಿಗೆ ಕರೆಮಾಡಿ ಅವರ ಜೂತೆ ಮಾತನಾಡಬೆಡಿ ಎಂದು ಹೇಳಿರುತ್ತಾರೆ.

ಪ್ರಾಸಾ 3 ರವರು ನನ್ನ ವಿರುದ್ದ ವರದಕ್ಷಿಣೆ ಕಿರುಕುಳ, ಜೀವನಾಂಶ ಹಾಗೂ ಎರಡನೇ ಮದುವೆಗಾಗಿ ಒಟ್ಟು 3 ಪ್ರಕರಣಗಳನ್ನು ದಾಖಲಿಸಿರುತ್ತಾರೆ. ವಿಚ್ಚೆದನದ ಅರ್ಜಿ ಸಲ್ಲಿಸಿದರೂ ಸಹ ನನ್ನ ಮಗಳು ಜನಿಸಿದ ನಂತರ ನಾನು ಸದರಿ ವಿಚ್ಚೇದನಾ ಅರ್ಜಿಯ ಮೇಲೆ ಯಾವುದೇ ಆಸಕ್ತಿ ತೆಗೆದುಕೊಂಡಿಲ್ಲ ಹಾಗೂ ಯಾವುದೇ ಮೇಲ್ಮನವಿ ಸಹ ಸಲ್ಲಿಸಿಲ್ಲ. ಈಗ ನಾನು ಮತು ನನ್ನ ತಾಯಿ ನಮ್ಮ ಮನೆಯಲ್ಲಿ ವಾಸವಿದೇವೆ. ನಾನು ಯಾವುದೇ ಎರಡನೇ ಮದುವೆ ಆಗಿಲ್ಲ.

**ಮುಂದಿನ ಮುಖ್ಯವಿಚಾರಣೆಗೆ ಸಮಯ ಕೋರಿದರಿಂದ ಸಮಯ ನೀಡಲಾಯಿತು.**

**(ತೆರೆದ ನ್ಯಾಯಾಲಯದಲ್ಲಿ ನನ್ನ ಉಕ್ತಲೇಖನದಂತೆ ಬೆರಳಚ್ಚು ಮಾಡಿಸಲಾಯಿತು)**
**ಓ.ಹೇ.ಕೇ. ಸರಿ ಇದೆ.**

**C/C ಹೆಚ್ಚುವರಿ ಪ್ರ.ದ.ನ್ಯಾ.ದಂ. ಚಿಂಚೋಳಿ**